

# ನೀರಿನೊಳಗಿನ ಮಂಜು

ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ಮೈ ಮನಗಳ ಸುಳಿಯಲ್ಲಿ...

ರಾಯರು 'ಖಾಸಗಿಯಾಗಿ ನಾವು ಮಾತನಾಡುವ ಮೊದಲು ಒಂದು ಹತ್ತು ನಿಮಿಷ ನಾನು ರೆಸ್ಟ್ ಮಾಡಬೇಕು. ಆದರೆ ಅದು ನಿದ್ದೆ ಮಾಡುವುದಿಲ್ಲ. ಬರೇ ರೆಸ್ಟ್! ಇದು ನಿವೃತ್ತಿಯಾದ ಮೇಲೆ ನನಗೆ ಅಂಟಿದ ರೋಗ' ಎಂದು ನಗುತ್ತಾ 'ಇಲ್ಲೇ ಸೋಫಾದಲ್ಲೇ ಒರಗಿ ಕಣ್ಣು ಮುಚ್ಚುತ್ತೇನೆ. ನೀವು ಕೋರ್ಟಿಗೆ ಹೋಗುವುದಿದ್ದರೆ ಹೋಗಿ ಬನ್ನಿ' ಎಂದರು.

ಸಂಜೀವರಾಯರು 'ಸಂಜೆ ನಾನು ಕೋರ್ಟಿಗೆ ಬರುವುದಿಲ್ಲ ಎಂದಿದ್ದೇನೆ ಸರ್. ನನ್ನ ಇಬ್ಬರು ಜೂನಿಯರ್ಸ್ ಈ ದಿನ ಕೇಸಿನ ತನಿಖೆ ಇದ್ದ ಹಾಗೆ ಇಲ್ಲ ಎಂದು ನನಗೆ ಹೇಳಿದ್ದಾರೆ' ಎಂದವರೇ 'ಸರ್ ಹತ್ತು ನಿಮಿಷ ಅಂತ ಬೇಡ. ಅರ್ಧ ಗಂಟೆ ಬೇಕಾದರೂ ನೀವು ರೆಸ್ಟ್ ಮಾಡಬಹುದು' ಎಂದು ಬೆಡ್ ರೂಮಿನಾಚೆ ತೆರಳಿದರು.

ರಾಯರು ಸೋಫಾದಲ್ಲೇ ಒಂದರ್ಧ ಗಂಟೆ ರೆಸ್ಟ್ ಮಾಡಿ ನಿಧಾನವಾಗಿ ಎದ್ದರು. ಹಜಾರದ ಪಕ್ಕದ ರೆಸ್ಟ್ ರೂಮಿಗೆ ಹೋಗಿ ಫ್ರೆಶ್‌ಅಪ್ ಆಗಿ ಬಂದ ಅವರು, 'ನಾನು ಸಿದ್ಧ' ಎನ್ನುವಂತೆ ಸಣ್ಣಗೆ ಎರಡು ಮೂರು ಬಾರಿ ಕೆಮ್ಮಿದರು. ಅದನ್ನು ಗಮನಿಸಿದ ಸಂಜೀವರಾಯರು ಬೆಡ್‌ರೂಮಿನಿಂದ ಹೊರಗೆ ಬಂದು 'ನಾನು ಅರ್ಧ ಕಪ್ ಟೀ ತರುತ್ತೇನೆ. ಆದೀತಲ್ಲ?' ಎನ್ನುತ್ತಾ ಸ್ವತಃ ಅವರೇ ಲೆಮನ್ ಟೀ ಮಾಡಿ ರಾಯರಿಗೆ ನೀಡಿ, ಅವರ ಪಕ್ಕದಲ್ಲಿ ಕುಳಿತು ಕುಡಿದರು.

ಇಬ್ಬರೂ ಅಪ್‌ಸ್ಟೇರ್ಸ್‌ನಲ್ಲಿರುವ ಸಂಜೀವರಾಯರ ಆಫೀಸಿಗೆ ಬಂದು ನಿಂತುಕೊಂಡರು. ವಿಶಾಲವಾದ ಕಚೇರಿ. ನಾಲ್ಕು ಮಂದಿ ಕುಳಿತುಕೊಳ್ಳಬಹುದಾದ ಸೋಫಾ. ಪಕ್ಕದಲ್ಲಿ ಮೂರು ಕುರ್ಚಿಗಳು. ರಾಯರು ಕುಳಿತುಕೊಳ್ಳುವ ಕುರ್ಚಿಯ ಇದಿರಿನಲ್ಲಿ ಮತ್ತೆ ಮೂರು ಕುರ್ಚಿಗಳು. ರಾತ್ರೆಯ ಸ್ಟಡಿಗೆ ಎನ್ನುವಂತೆ ಒಂದು ಆಧುನಿಕವೆನ್ನಬಹುದಾದ ಈಸಿ ಚೇರ್. ಪಕ್ಕದಲ್ಲಿ ಎತ್ತರದ ಒಂದು ಟೀಪಾಯ್ ಮತ್ತು ಅದರಲ್ಲಿ ಒಂದು ಲ್ಯಾಂಪು.

ಸಂಜೀವರಾಯರು ಕೂಡುವ ಕುರ್ಚಿಯ ಹಿಂದುಗಡೆ ಇರುವ ಮೂರು ಕಬೋರ್ಡಿನಲ್ಲಿ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳು ಮತ್ತು ಮೇಜಿನ ಮೇಲೂ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಜರ್ನಲ್‌ಗಳು ಇದ್ದುವು. ರಾಯರು ಅವನ್ನೆಲ್ಲ ಗಮನಿಸಿ ಒಳಗೊಳಗೇ 'ಈತ ಒಳ್ಳೆ ವಕೀಲನೇ ಇರಬೇಕು' ಎಂದುಕೊಂಡರು. ಇನ್ನೂ ನಿಂತೇ ಇದ್ದ ರಾಯರ ಬಳಿ ಬಂದ ಸಂಜೀವರಾಯರು 'ಕುಳಿತುಕೊಳ್ಳಿ ಸರ್. ಈ ಈಸಿ ಚೇರ್‌ನಲ್ಲೇ ಕೂರಬಹುದು' ಎನ್ನುತ್ತಾ, 'ಈ ಚೇರ್, ನಾನು ಒಬ್ಬ ಕಾರ್ಪೆಂಟರಿನಲ್ಲಿ ಹೀಗೇ ಇರಬೇಕು ಎಂದು ಹೇಳಿ ಮಾಡಿಸಿದ್ದು. ವೆರಿ ಕಂಫರ್ಟೆಬಲ್ ಆಗಿದೆ ನೋಡಿ' ಎಂದರು. ರಾಯರು ಆ ಚೇರಿನಲ್ಲಿ ಕುಳಿತುಕೊಳ್ಳುತ್ತಿದ್ದ ಹಾಗೆ, ಆಫೀಸಿನ ಬಾಗಿಲು ಮುಚ್ಚಿದ ಸಂಜೀವರಾಯರು ತನ್ನ ಕುರ್ಚಿಯಲ್ಲಿ ಕುಳಿತುಕೊಂಡು ಫ್ಯಾನ್ ಆನ್ ಮಾಡಿದರು. 'ಈಗ ನಿಮಗೆ ಏನು ಕೇಳಬೇಕು ಅಥವಾ ನಾನು ಏನು ಹೇಳಬೇಕು ಎಂದು ನೀವು ಬಯಸುತ್ತೀರೋ ಅದನ್ನು ಕೇಳಿ ಪ್ಲೀಸ್' ಎಂದರು.

ರಾಯರಿಗೆ ಹೇಗೆ ಮತ್ತು ಎಲ್ಲಿಂದ ಮಾತು ಪ್ರಾರಂಭಿಸುವುದೆಂದು ಹೊಳೆಯಲಿಲ್ಲ. ಅದೂ ಅಲ್ಲದೆ ಅವರು ಕತೆ ಕಾದಂಬರಿಗಳಲ್ಲಿ ಇಂಥ ಸನ್ನಿವೇಶಗಳ ಚಿತ್ರಣಗಳನ್ನು ಓದಿದ್ದರೂ ಅದನ್ನು ಸೀರಿಯಸ್ಸಾಗಿ ಪರಿಗಣಿಸಿರಲಿಲ್ಲ. ಇಷ್ಟಕ್ಕೂ ಲೈಂಗಿಕತೆಯ ಬಗ್ಗೆ ಅರಿವಿದೆ ಎನ್ನುವ